ಅ) ಬೀಳು ಭೂಮಿ ರೆಸ್ಟೋರೇಶನ್‌ಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ್ದ ಕಾಲಾವಧಿ ಮುಂದುವರೆಸುವ ಇಚ್ಛೆ ಸರ್ಕಾರಕ್ಕೆ ಇದೆಯೇ ಹೌದಾದರೆ ಯಾವಾಗ ವಿಸ್ತರಿಸಲಾಗುವುದು ;

ಆ) ಕಾನೂನಿನ ಅಜ್ಞಾನದಿಂದ ಸಕಾಲದಲ್ಲಿ ಬೀಳು ರೆಸ್ಟೋರೇಶನ್‌ಗೆ ಅರ್ಹ ರೈತರು ಅರ್ಜಿ ಸಲ್ಲಿಸಲು ಆಗದೇ ಇರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹೌದಾದರೆ ಈ ಪ್ರಕರಣಗಳನ್ನು ಹೊಸದಾಗಿ ನೋಂದಾಯಿಸಲು ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು ;

ಈ) ಬೀಳು ರೆಸ್ಟೋರ್ ಪ್ರಕರಣಗಳನ್ನು ಅದ್ಯತೆ ಮೇಲೆ ಇತ್ಯರ್ಥಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬೀಳು ಭೂಮಿ ರೆಸ್ಟೋರೇಷನ್‌ಗಾಗಿ ಅರ್ಜಿ ಸಲ್ಲಿಸಿಕೊಳ್ಳಲು ಕಾಲಾವಧಿ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) -- ಹೌದು --

ಇ) ಮತ್ತು ಈ) ಬೀಳು ರೆಸ್ಟೋರ್‌ಗಾಗಿ ಕಾಲಾವಧಿ ವಿಸ್ತರಿಸಲು ಪ್ರಸ್ತಾವನೆ ಪರಿಶೀಲನೆಯಲ್ಲಿರುವ ಕಾರಣ ಈ ಪ್ರಶ್ನೆಗಳಿಗೆ ಉತ್ತರ ಉದ್ಭವಿಸುವುದಿಲ್ಲ.

ತಿರುಮಲ ಕರ್ನಾಟಕ ಛತ್ರದ ನಿರ್ವಹಣೆ

4303(4974) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತಿರುಮಲ ಆಂಧ್ರ ಪ್ರದೇಶದಲ್ಲಿರುವ ಕರ್ನಾಟಕ ಛತ್ರದಲ್ಲಿ ಕಳೆದ 3 ವರ್ಷಗಳಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳು ಯಾರು : ಅವರ ವಿರುದ್ಧ ಹಣ ದುರುಪಯೋಗದ ಆಪಾದನೆಗಳಿವೆಯೇ : ಅದರ ಮೇಲೆ ಏನು ಕರಮ ತೆಗೆದುಕೊಳ್ಳಲಾಗಿದೆ ; (ವಿವರ ಒದಗಿಸುವುದು) ;

ಆ) ಕರ್ನಾಟಕ ಛತ್ರಕ್ಕೆ ಮಹಾರಾಜರ ಕಾಲದಲ್ಲಿ ಕೊಳ್ಳಲಾದ ಜಮೀನಿನ ವಿಸ್ತೀರ್ಣ ಎಷ್ಟು : ಈಗ ಇರುವುದು ಎಷ್ಟು ;

ಇ) ಈ ಆಸ್ತಿ ಕಡಿಮೆಯಾಗಲು ಕಾರಣಗಳೇನು : ಪರಭಾರೆ ಮಾಡಿದವರು ಯಾರು ;

ಈ) ಲೆಕ್ಕ ಪರಿಶೋಧನೆಯಲ್ಲಿ ಈವರೆಗೆ ಕಂಡು ಹಿಡಿದಿರುವ ಅಂಶಗಳೇನು : ಇದನ್ನು ಸರಿಪಡಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ;

ಉ) ತಿರುಮಲದಲ್ಲಿರುವ ಕರ್ನಾಟಕ ಛತ್ರದ ಒಟ್ಟಾರೆ ಆಸ್ತಿಯ ಮೌಲ್ಯವೆಷ್ಟು ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ತಿರುಮಲೆಯಲ್ಲಿ ಇರುವ ಕರ್ನಾಟಕ ರಾಜ್ಯ ಛತ್ರದಲ್ಲಿ ಕಳೆದ 3 ವರ್ಷಗಳಲ್ಲಿ ವಿಶೇಷಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದವರ ಹೆಸರು ಈ ಕೆಳಕಂಡಂತೆ ಇರುತ್ತದೆ.

2000–2001ನೇ ಸಾಲಿನಲ್ಲಿ	ಶ್ರೀ ಟಿ.ಎನ್. ರಮೇಶ
(ದಿ: 12–04–1997 ರಿಂದ	(ಪ್ರಭಾರ ವಿಶೇಷಾಧಿಕಾರಿ)
15–05–2001 ರವರೆಗೆ)	

2001–2002ನೇ ಸಾಲಿನಲ್ಲಿ (ದಿ: 15–05–2001 ರಿಂದ 03–07–2002 ರವರೆಗೆ)	ಶ್ರೀ ವೆಂಕಟರತ್ನಯ್ಯ ಶೆಟ್ಟಿ (ಪ್ರಭಾರ ವಿಶೇಷಾಧಿಕಾರಿ)
2002–2003ನೇ ಸಾಲಿನಲ್ಲಿ (ದಿ: 04–07–2002 ರಿಂದ ಈವರೆಗೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.)	ಶ್ರೀ ಎ.ಹೆಚ್. ಮದರ್‌ಕಲ್ ವಿಶೇಷಾಧಿಕಾರಿ

ಕಳೆದ 3 ವರ್ಷಗಳಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳ ಬಗ್ಗೆ ಹಣ ದುರುಪಯೋಗದ ಆಪಾದನೆಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ತಿರುಮಲದ ಕರ್ನಾಟಕ ರಾಜ್ಯ ಛತ್ರವು ಮಹಾರಾಜರ ಆಳ್ವಿಕೆಯಲ್ಲಿ ಇದ್ದಾಗ ಸರ್ವೆ ನಂ. 636ರಲ್ಲಿ 1.90 ಎಕರೆ ಜಮೀನನ್ನು 24–04–1931 ರಲ್ಲಿ ಖರೀದಿಸಲಾಗಿದೆ. ಸರ್ವೆ ನಂ 637/1ರ 2.35 ಸೆಂಟ್ಸ್ ವಿಸ್ತೀರ್ಣ ಇನಾಂ ಮೇರೆಗೆ ಮಹಾರಾಜರಿಗೆ ನೀಡಲಾಗಿತ್ತು. ಇದರಲ್ಲಿ ಈಗ 4 ಎಕರೆ ಜಮೀನು ನಮ್ಮ ಸ್ವಾಧೀನದಲ್ಲಿರುತ್ತದೆ.

ಇ) ತಿರುಮಲ – ತಿರುಪತಿ ಅಭಿವೃದ್ಧಿಗೆ ಸಂಬಂಧಿಸಿದಂತೆ 0.25 ಸೆಂಟ್ಸ್ ಜಮೀನನ್ನು ರಸ್ತೆ ವಿಸ್ತೀರ್ಣ ಕಾರ್ಯಕ್ಕಾಗಿ ಸರ್ಕಾರದ ಅನುಮತಿ ಮೇರೆಗೆ ಬಿಟ್ಟುಕೊಡಲಾಗಿದೆ.

ಈ) ಕರ್ನಾಟಕ ರಾಜ್ಯ ಛತ್ರದ 1999–2000ನೇ ಸಾಲಿನವರೆಗೆ ಲೆಕ್ಕ ತಪಾಸಣೆ ಆಗಿದ್ದು 2000–2001ನೇ ಸಾಲಿನಿಂದ ಲೆಕ್ಕ ತಪಾಸಣೆ ನಡೆಯಬೇಕಾಗಿರುತ್ತದೆ. ಲೆಕ್ಕ ತಪಾಸಣೆ ನಡೆಸುವಂತೆ ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆರವರನ್ನು ಕೋರಲಾಗಿದೆ. ಲೆಕ್ಕ ಪರಿಶೋಧನೆಯಲ್ಲಿ ಕಂಡು ಬರುವ ಆಡಳಿತಾತ್ಮಕ ಹಾಗೂ ಹಣ ದುರುಪಯೋಗದ ಬಗ್ಗೆ ಆಕ್ಷೇಪಣೆಗಳು ಕಂಡು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಸಿ.ಸಿ.ಎ. ನಿಯಮದಡಿ ಶಿಸ್ತು ಕ್ರಮ ಜರುಗಿಸಲಾಗುವುದು.

ಉ) ತಿರುಮಲದಲ್ಲಿ ಹೆಚ್ಚಿನ ಜಮೀನು ಟಿ.ಟಿ.ಡಿ. ಪ್ರಾಧಿಕಾರಕ್ಕೆ ಸಂಬಂಧಿಸಿದ್ದು ಕ್ರಯ – ವಿಕ್ರಯ ನಡೆದಿರುವಂತೆ ಕಂಡುಬರುತ್ತಿಲ್ಲವಾದ್ದರಿಂದ ಇಲ್ಲಿನ ಜಮೀನಿನ ಅಂದಾಜು ಮೌಲ್ಯ ಲಭ್ಯವಿಲ್ಲ.

ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ

4304(4975) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಬೆಳವಣಿಗೆಗಳನ್ನು ಜನಪ್ರಿಯಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

ಆ) ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಮಾಹಿತಿ ತಂತ್ರಜ್ಞಾನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೇಮಕವಾಗಿರುವ ಅಧಿಕಾರಿಗಳು ಯಾರು ;

ಇ) ಹೊರ ದೇಶಗಳಲ್ಲಿರುವಂತೆ ರಾಜ್ಯದಲ್ಲಿಯು ಸಹ ಮಾಹಿತಿ ತಂತ್ರಜ್ಞಾನ ಪ್ರಚಾರ ಅಂದೋಲನವನ್ನು ಜನಪ್ರಿಯಗೊಳಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ :